ಪ್ರಾಣಿಯ ಹೊಲಸು ಮತ್ತೊಂದು ಪ್ರಾಣಿಗೆ ಆಹಾರವಾಗುತ್ತದೆ. ಅದು ನಿಸರ್ಗದ ಒಂದು ಅದ್ಭುತವಾದ ಸೊಗಸಾದ ನಿಯಮ. ಪ್ರಾಣಿಗಳ ಹೊಲಸನ್ನು ಸಸ್ಯಗಳು ಜೀರ್ಣಿಸಿಕೊಂಡು ಪ್ರತಿಯಾಗಿ ಮನುಷ್ಯರಿಗೆ ಯಥೇಚ್ಛವಾದ ಆಹಾರ ಧಾನ್ಯಗಳನ್ನು ಉತ್ಪಾದಿಸುವುದಿಲ್ಲವೆ? ಜಡ ವಸ್ತುಗಳಿಗೆ ಕರುಳಿರುವುದಿಲ್ಲ...'

'ಆದರೆ ಜಡ ವಸ್ತುಗಳಲ್ಲೂ ಎನರ್ಜಿಯಿರುತ್ತದೆ...' ನೀಲಾಂಜನ ಧಾತುಸೇನರ ಮಾತುಗಳನ್ನು ತುಂಡರಿಸಿ ಥಟ್ಟನೆ ಹೇಳಿದ್ದಳು.

'ಹೌದು, ಒಂದು ಪರಮಾಣುವಿನಿಂದ ಹಿಡಿದು ಬ್ರಹ್ಮಾಂಡದವರೆಗೂ ಪ್ರತಿಯೊಂದನ್ನೂ ಒಂದೊಂದು **block** ಆಗಿ ವಿಂಗಡಿಸಬಹುದು. ಎಲ್ಲಾ **block**ಗಳೂ ಇಂಡಿಪೆಂಡೆಂಟ್ ಎನರ್ಜಿ **source**ಗಳೇ ಆಗಿರುತ್ತವೆ. ನಾನು, ನೀವು ಹಿಮಾಲಯ, ಗಂಗಾನದಿ, ಈ ಹೋಮಕುಂಡ, ಕಿವಿ, ಮೂಗು, ತುಟಿ, ಯೋನಿ, ಕಾರು, ಪಕ್ಷಿ, ಹುಳ ಉಪ್ಪಟೆ ಎಲ್ಲವೂ **block**ಗಳೇ. ಆದರೆ ಸಮಯವನ್ನು ಮಾತ್ರ **block** ಎಂದು ಕರೆಯಲು ಬರುವುದಿಲ್ಲ. ಇಷ್ಟಕ್ಕೂ 'ಸಮಯ' ಎಂದರೇನೆಂಬುದು ಮನುಷ್ಯನ ತಿಳಿವಳಿಕೆಯ ವ್ಯೂಹಕ್ಕೆ ಸಿಲುಕಿಲ್ಲ. ಹಾಗಾಗಿ ಜೀವ ಜಂತುಗಳಿಗೆ ಹಸಿವು, ಕಾಮ ಮತ್ತು ಅವುಗಳಿಂದ ಸಿಗುವ ತೃಪ್ತಿ ಮಾತ್ರವೇ ಮುಖ್ಯವಾಗುತ್ತವೆ. ಮನುಷ್ಯನ ಪ್ರಜ್ಞೆಗೆ ನಿಲುಕದ ಕೋಟ್ಯಂತರ ಸಂಗತಿಗಳು ಕಣ್ಣಿಗೆ ಕಾಣದ ಗಾಳಿಯಲ್ಲಿ ಅಡಗಿಕೊಂಡಿವೆ. ಓಹ್, ಮಾತುಗಳು ಎಲ್ಲಿಂದ ಎಲ್ಲಿಗೋ ಹೊರಟವು...' ಧಾತುಸೇನರು ವಜ್ರಾಸನದಿಂದ ವಿಮುಕ್ತರಾಗಿ ನಿಂತುಕೊಳ್ಳುವುದರೊಂದಿಗೆ ಕರೆಂಟು ಬಂದಿತ್ತು. ಹಾಲಿನಂಥ ಬೆಳಕಿನಲ್ಲಿ ಧಾತುಸೇನರು ಮೊದಲಿಗಿಂತಲೂ ಕೃಶವಾಗಿ ಕಾಣುತ್ತಿದ್ದರು. ಹೋಮ ಕುಂಡದ ಹಿಂಬದಿಯಲ್ಲಿ ಗೋಡೆಗೆ ಒರಗಿಸಿದ್ದ ಸಿಂಹಾಸನದಂತಿದ್ದ ಪೀಠದ ಮೇಲೆ ಕುಳಿತವರು ನಮಗೆ ಸೋಫಾದ ಮೇಲೆ ಕುಳಿತುಕೊಳ್ಳಲು ಹೇಳಿದ್ದರು. ವಿದ್ಯುತ್ ಬೆಳಕಿನಲ್ಲಿ ಮನೆ ಈಗ ಮತ್ತಷ್ಟು ವಿಶಾಲವಾಗಿ, ಸುಂದರವಾಗಿ ಕಾಣುತ್ತಿತ್ತು. ಮುಚ್ಚಿದ ರೂಮುಗಳಲ್ಲಿ ಜನರ ಚಲನ ವಲನಗಳ ಚಹರೆ ಅರಿವಾಗುತ್ತಿತ್ತು.

'ಸದಾ ಇಲ್ಲಿ ಅತಿಥಿಗಳಿರುತ್ತಾರೆ. ಹೆಚ್ಚಾಗಿ ವಿದೇಶಿಯರು. ಬದುಕಿನ ಬಗ್ಗೆ ನಮಗಿಂತಲೂ ಅತ್ಯಂತ ಜಿಜ್ಞಾಸೆ, ಕ್ಲೀಶೆಗಳಿರುವುದು ಅವರಿಗೇನೇ. ಈಗಲೂ ಆರು ಮಂದಿ ಜರ್ಮನಿಯವರಿದ್ದಾರೆ. ಬಂದು ತಿಂಗಳಾಗುತ್ತಾ ಬಂತು. ಬಾಂಗ್ ಸೇವಿಸಿ ಗಂಟೆಗಟ್ಟಲೆ ಧ್ಯಾನಸ್ಥ ಸ್ಥಿತಿಯಲ್ಲಿರುತ್ತಾರೆ. ಬಾಂಗ್ ಮನುಷ್ಯ ದೇಹವನ್ನು ಹಗುರಗೊಳಿಸುತ್ತದೆ. ಹಗುರಗೊಂಡಾಗ ಮನುಷ್ಯ ಅತ್ಯಂತ ಹೆಚ್ಚು ಖುಶಿಯಾಗಿರುತ್ತಾನೆ. ಬಾಂಗ್‌ನ ಇನ್ನೊಂದು ಮಹತ್ವದ ಲಕ್ಷಣವೆಂದರೆ ದ್ವೇಷ– ರೋಷಗಳಿಂದ ಮನುಷ್ಯನನ್ನು ಮುಕ್ತಗೊಳಿಸುವುದು. ಈ ಬನಾರಸ್‌ನಲ್ಲಿ ಬಾಂಗ್ ಸೇವಿಸದಿರುವ ಒಬ್ಬನೇ ಒಬ್ಬ ಸಾಧು ಕೂಡ ಸಿಗುವುದಿಲ್ಲ. ಆದರೆ ಬಾಂಗ್ ಪಡೆದುಕೊಳ್ಳುವುದಕ್ಕಾಗಿ ಜಗಳ, ಹೊಡೆದಾಟ, ಮರ್ಡರ್ ಕೂಡ ನಡೆದಿರುವ ಉದಾಹರಣೆಗಳೂ ಇಲ್ಲಿವೆ! ಯುದ್ಧ ಮತ್ತು ಅಧಿಕಾರ ದಾಹದಿಂದ ಒದ್ದಾಡುತ್ತಿರುವ ಜಗತ್ತಿನ ಎಲ್ಲಾ ನಾಯಕರಿಗೂ ಬಾಂಗ್‌ನ ಚಟ ಹತ್ತಿಸಿದರೆ ಹೇಗಿರುತ್ತದೆಂದು ಒಮ್ಮೊಮ್ಮೆ ಯೋಚಿಸಿದ್ದುಂಟು. **A Leader is a dealer in hope** ಎಂದು ನೆಪೋಲಿಯನ್ ಬೋನಾಪಾರ್ಟೆ ಹೇಳುತ್ತಾನೆ. ಆದರೆ ಕೊನೆಗಳಿಗೆಯಲ್ಲಿ ಹಸಿವನ್ನು ಇಂಗಿಸಿಕೊಳ್ಳಲು ಅವನೇ ಹೆಣವನ್ನು ಕಿತ್ತು ತಿಂದದ್ದು ಎಂಥ ದೊಡ್ಡ ವಿಪರ್ಯಾಸ. ನೀವು ಮಹಾತ್ಮ ಗಾಂಧಿಯನ್ನು ಓದಿ. **A Leader is a dealer in hope** ಎಂಬ ವಾಕ್ಯ ಬಹುಶಃ ಗಾಂಧಿಗೆ ಮಾತ್ರ ಅನ್ವಯಿಸುತ್ತದೆಂಬುದು ಇತಿಹಾಸವನ್ನು ಗಂಭೀರವಾಗಿ ಓದಿದ ನನ್ನ ತಿಳಿವಳಿಕೆ. ಗಾಂಧಿ ಅತ್ಯಂತ